SEVA BHARATHI
सेवा ही परमो धर्मः

# ಸೇವಾಪಥ

ಸೇವಾಭಾರತಿ(ರಿ.), ಬೆಳ್ತಂಗಡಿ ತಾ॥ ಇದರ
(ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ-2019 ಪುರಸ್ಕೃತ ಸಂಸ್ಥೆ)
ಮಾಸಿಕ e–ನ್ಯೂಸ್ ಲೆಟರ್ – ಜುಲೈ 2022

ಸಂಪುಟ : 03
ಸಂಚಿಕೆ : 05

ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ–II, ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ. – 574 216

## ಆರೋಗ್ಯಸ್ಪರ್ಶ ಯೋಜನೆಯಡಿ ದಿವ್ಯಾಂಗರ ಮನೆಭೇಟಿ, ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆ



## ಸಾಧಕರೆ ಚಾವಡಿಯಲ್ಲಿ ಏಗ್ಗೆ–1 ಸಂದರ್ಶನ

## ಬೆಂಗಳೂರು ಮತ್ತು ಉತ್ತರ ಕನ್ನಡ ಜಿಲ್ಲೆಯ ಕುಮಟಾ ಭೇಟಿ

## ಸೇವಾಭಾರತಿಯ ಸಂಸ್ಥಾಪಕರಾದ ಕೆ.ವಿನಾಯಕ್ ರಾವ್ ಅವರ ಹುಟ್ಟುಹಬ್ಬ ಆಚರಣೆ

## ಆಯ ತಪ್ಪಿದರೂ ಬದುಕಿನ ಏಣಿ ಏರಿದ ಛಲಗಾರ ಬಾಯಾರಿದ ಜೀವನಕ್ಕೆ ದಾರಿ ತೋರಿದ ಎಳನೀರು

ಯಶೋಗಾಥೆ

Mob. : 99454 91241 | E-mail: sevabharathikanyady@gmail.com | Website: www.sevaabharathi.org

## ನಮ್ಮಿಂದಿಷ್ಟು

ಬೆನ್ನುಹುರಿ ಮುರಿತದ ಕಾರಣ ಮನೆ ಮನೆಗಳಲ್ಲಿ ಬಾಕಿಯಾಗಿರುವವರು ತುಂಬಾ ಮಂದಿ. ಅದರಲ್ಲಿ ಮಾಹಿತಿಗಳ ಕೊರತೆಯಿಂದ ದ್ವಿತಿಯಾಂತರ ಸಮಸ್ಯೆಗಳಿಂದ ಬಳಲುತ್ತಿರುವುದನ್ನು ನೋಡಿದರೆ ಕರುಳು ಹಿಂಡಿದಂತಾಗುತ್ತದೆ. ಕಾಲುಗಳಲ್ಲಿ ಸೆಟೆತನ, ಬಿಗಿತನ, ನಡುಕಗಳು, ಒತ್ತಡಗಾಯಗಳು, ಸೂಕ್ತ ಸಾಧನ ಸಲಕರಣೆಗಳಿಲ್ಲದಿರುವುದು, ರ್‍ಯಾಂಪ್ ಮತ್ತು ಶೌಚಾಲಯಗಳ ನಿರ್ಮಾಣಕ್ಕೆ ಆರ್ಥಿಕ ಸಬಲರಲ್ಲದಿರುವುದು, ಮಾನಸಿಕ ಒತ್ತಡಕ್ಕೆ ಒಳಗಾಗಿರುವುದು ಸೇರಿ ಆಗಾಗ ಮೂತ್ರ ನಾಳದ ಸೋಂಕುಗಳು, ಮಲಬದ್ಧತೆಯಿಂದ ಜೀವನ ಹೈರಾಣವಾಗಿರುವುದರ ಜೊತೆಗೆ ಬಿ.ಪಿ ಮತ್ತು ಸಕ್ಕರೆ ಖಾಯಿಲೆ ನಮ್ಮಂತಹವರನ್ನು ಹಿಂಡಿ ಹಿಪ್ಪೆ ಮಾಡಲು ಕಾಯುತ್ತಿರುತ್ತದೆ.

ಅದಕ್ಕಾಗಿ ಕನಿಷ್ಠ ಪಕ್ಷ ಒಂದು ಜಿಲ್ಲೆಯ ವ್ಯಾಪ್ತಿಗೆ ಒಬ್ಬ ಕ್ಷೇತ್ರ ಸಂಯೋಜಕರನ್ನು ನೇಮಿಸಿ, ಅವನ ಮೂಲಕ ಇಲಾಖೆ, ಕೊಡುಗೈದಾನಿ ಮತ್ತು ಇತರೇ ಸಂಘ ಸಂಸ್ಥೆಗಳ ನೆರವಿನಿಂದ ಫಲಾನುಭವಿಗಳಿಗೆ ಮಾಹಿತಿಗಳು, ಸಾಧನ ಸಲಕಣೆಗಳನ್ನು ಒದಗಿಸುವುದರ ಜೊತೆಗೆ ಅವನ ಸ್ವಾವಲಂಬಿ ಬದುಕಿಗೆ ಕೈ ಜೋಡಿಸುವ ಕೆಲಸವನ್ನು ಮಾಡುವುದು ನಮ್ಮ ಉದ್ದೇಶ.

ಉತ್ತರಕನ್ನಡ ಜಿಲ್ಲೆಯಲ್ಲಿ ಕೂಡಾ ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಶ್ರಮಿಸುವ ಸಂಘ ಸಂಸ್ಥೆಗಳು ಲಭ್ಯವಿಲ್ಲದಿರುವುದನ್ನು ಕಂಡು ಆ ಜಿಲ್ಲೆಯನ್ನು ನಮ್ಮ ಸೇವಾ ವ್ಯಾಪ್ತಿಗೆ ಒಳಪಡಿಸಿರುತ್ತದೆ. ಈ ಪರಿಣಾಮ ಮುಂದಿನ ತಿಂಗಳು ಒಬ್ಬ ಕೇಂದ್ರ ಸಂಯೋಜಕ ಅಲ್ಲಿ ಸೇವೆಗಳನ್ನು ವಿಸ್ತರಿಸಲು ಪ್ರಾರಂಭಿಸುತ್ತಿದ್ದಾನೆ ಎಂಬುದನ್ನು ತಿಳಿಸಲು ಸಂತೋಷವಾಗುತ್ತಿದೆ. ಪರಿಣಾಮ ಕಾದು ನೋಡಬೇಕಿದೆ. ಧನಾತ್ಮಕವಾಗಿ ವರದಿಗಳು ಬರಬಹುದಾಗಿದೆ.

ಇತೀ ತಮ್ಮವ
**ಕೆ. ವಿನಾಯಕ ರಾವ್**

## ನಮ್ಮ ವಿಳಾಸ

### ಪ್ರಧಾನ ಕಚೇರಿ :

ಸೇವಾನಿಕೇತನ, ಕನ್ಯಾಡಿ–II
ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು – 574 216
ಮೊ.: 99454 91241

### ಜಿಲ್ಲಾ ಕಚೇರಿ :

ಸೇವಾನಿಕೇತನ
ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಬಳಿ
ಹೆರ್ಗ, ಉಡುಪಿ ತಾಲೂಕು – 576 107
ಮೊ.: 9606044893

### ಸೇವಾ ಕೇಂದ್ರ :

ಸೇವಾಧಾಮ
(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)
ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ
ಕೊಕ್ಕಡ ಗ್ರಾಮ – 574 198
ಮೊ.: 94482 54888

## ನಮ್ಮ ತಂಡ

| | |
|---|---|
| ಶ್ರೀ ಕೆ. ವಿನಾಯಕ ರಾವ್ | – ಅಧ್ಯಕ್ಷರು |
| ಶ್ರೀಮತಿ ಸ್ವರ್ಣಗೌರಿ | – ಕಾರ್ಯದರ್ಶಿ |
| ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್ | – ಖಜಾಂಚಿ |
| ಶ್ರೀ ಕೆ. ಯು. ಗಿರೀಶ್ ರಾವ್ | – ಉಪಾಧ್ಯಕ್ಷರು |
| ಶ್ರೀ ಕೆ. ಬಾಲಕೃಷ್ಣ | – ಟ್ರಸ್ಟಿ |

## ಸಲಹಾ ಮಂಡಳಿ

ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
ಶ್ರೀಮತಿ ಮನೋರಮ ಭಟ್
ಶ್ರೀ ಉದಯಶಂಕರ್
ಶ್ರೀ ಹರೀಶ್ ಟಿ. ಪಿ.
ಶ್ರೀ ಗೋಪಾಲ ಕೆ. ಪಿ.
ಶ್ರೀ ವಿಷ್ಣು ಪ್ರಸಾದ್ ತೆಂಕಿಲ್ಲಾಯ
ಶ್ರೀಮತಿ ಜ್ಯೊಸ್ ಪಿರೇರಾ

## ಸಂಚಾಲಕರು

| | |
|---|---|
| ಶ್ರೀ ಕೆ. ಪುರಂದರ ರಾವ್ | – ಸಂಚಾಲಕರು, ಸೇವಾಧಾಮ |
| ಶ್ರೀಯುತ ರಾಯನ್ ಫೆರ್ನಾಂಡಿಸ್ | – ನಿರ್ದೇಶಕರು, ಸೇವಾಧಾಮ |
| ಶ್ರೀ ವಿಜಯ ಕೊಡವೂರು | – ನಿರ್ದೇಶಕರು, ಸೇವಾಧಾಮ |
| ಡಾ. ಮುರಳೀಧರ ನಾಯಕ್ | – ನಿರ್ದೇಶಕರು, ಸೇವಾಧಾಮ |

# ಆರೋಗ್ಯಸ್ಪರ್ಶ ಯೋಜನೆಯಡಿ ದಿವ್ಯಾಂಗರ ಮನೆಭೇಟಿ, ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆ





**ಉಡುಪಿ :** ಉಡುಪಿ ಜಿಲ್ಲೆಯ ಆರೋಗ್ಯ ಇಲಾಖೆಯ ಮುಖಾಂತರ ಉಡುಪಿ ಜಿಲ್ಲೆಯಲ್ಲಿರುವ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಮನೆ ಭೇಟಿ, ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸೆಯನ್ನು ನಡೆಸಲಾಯಿತು.

ಆರೋಗ್ಯಸ್ಪರ್ಶ ಯೋಜನೆಯಡಿ ನಡೆದ ಈ ಕಾರ್ಯಕ್ರಮದಲ್ಲಿರುವ ಒಟ್ಟು 42 ಮಂದಿ ಬೆನ್ನುಹುರಿ ಅಪಘಾತಗೊಂಡವರಿಗೆ ಈ ಸೌಲಭ್ಯ ಒದಗಿಸಲಾಯಿತು.

6 ಹಂತದಲ್ಲಿ ಆರೋಗ್ಯ ಇಲಾಖೆಯ ಸಿಬ್ಬಂದಿಗಳಾದ_ ಇ.ಎಂ.ಟಿ ಪ್ರಶಾಂತ್, ಪರಮೇಶ್ವರ, ಕುಮಾರಿ, ದೇವಕಿ, ದೇವಿಕಾ, ಪ್ರತಿಭಾ ಇವರು ಭಾಗವಹಿಸಿದ್ದರು.

ಸೇವಾಭಾರತಿ ಉಡುಪಿ ಜಿಲ್ಲೆಯ ಕಾರ್ಯಕರ್ತರಾದ ವೈಭವ್, ಮನು ಭಂಡಾರಿ, ಸುದರ್ಶನ್ ರಾಜ್, ಸಂಪತ್ ರಾಜ್, ವರುಣ್, ವಿಜಯ ಕೊಡವೂರು, ಅಶೋಕ್ ಶೆಟ್ಟಿ, ವಿಷ್ಣುಪ್ರಸಾದ್ ತಂಕಿಲ್ಲಾಯ, ಅಶೋಕ್, ಅಖಿಲೇಶ್, ಸಂತೋಷ್ ಸುವರ್ಣ ಈ ತಂಡದಲ್ಲಿದ್ದು ಸಹಕರಿಸಿದ್ದರು.

# ಸಾಧಾಕೆರೆ ಚಾವಡಿಯಲ್ಲಿ ಎಗ್ಗೆ–1 ಸಂದರ್ಶನ

**ಉಡುಪಿ :** ಜುಲಾಯಿ 11 ರಂದು ಉಡುಪಿಯಲ್ಲಿರುವ ಯಶೋಧಾ ಕೇಶವ್ ಇವರ ಮಾಲಿಕತ್ವದ ತುಳುನಾಡ ಧ್ವನಿವಾಹಿನಿಯಲ್ಲಿ ಸಾಧಾಕೆರೆ ಚಾವಡಿ ಎಗ್ಗೆ–1 ರಲ್ಲಿ ಅಧ್ಯಕ್ಷರಾದ ಕೆ.ವಿನಾಯಕ ರಾವ್ ರವರನ್ನು ಸಚ್ಚೇಂದ್ರ ಅಂಬಾಗಿಲು ಇವರು ಸಂದರ್ಶನ ಮಾಡಿದರು. ತಂಡದಲ್ಲಿ ವಿಷ್ಣು ಭಟ್ ತೆಂಕಿಲ್ಲಾಯ, ಜೋಸ್ಫಿನಾ, ಕಮಲಾಕ್ಷ ಗುಡಿಗಾರ್ ಉಪಸ್ಥಿತರಿದ್ದರು.



## ದಾನಿಗಳು

18–07–2022 ರಂದು ಮೈಸೂರಿನ ಶ್ರೀ ಅಂಕುಶ್ ಇವರು ತಮ್ಮ ಹುಟ್ಟುಹಬ್ಬದ ಸಲುವಾಗಿ 1,001/– ರೂ. ಗಳನ್ನು ಸೇವಾಭಾರತಿಗೆ ದೇಣಿಗೆ ನೀಡಿದರು.



30–07–2022 ರಂದು ಶ್ರೀ ಶ್ರೀಶ ಗಣೇಶ್ ಇವರು ಸೇವಾನಿಕೇತನಕ್ಕೆ ಭೇಟಿ ನೀಡಿ ಸೇವಾಭಾರತಿಯ ಕಾರ್ಯ ಚಟುವಟಿಕೆಗಳನ್ನು ಸಿಬ್ಬಂದಿಯಿಂದ ತಿಳಿದು ಒಂದು ಗಾಲಿಕುರ್ಚಿಯನ್ನು ಕೊಡುಗೆಯಾಗಿ ನೀಡಿದರು.

### ಜುಲಾಯಿ ತಿಂಗಳಲ್ಲಿ ದೇಣಿಗೆ ನೀಡಿದ ಸಂಘ ಸಂಸ್ಥೆಗಳು

| | |
|---|---|
| ಅಸೋಷಿಯೇಶನ್ ಆಫ್ ಪೀಪಲ್ ವಿದ್ ಡಿಸೆಬಿಲಿಟಿ | 82,500/– |
| ಕೊಡವೂರು ವ್ಯವಸಾಯ ಸೇವಾ ಸಹಕಾರ ಸಂಘ | 25,000/– |
| ಪ್ರಶಮನಿ ಟ್ರಸ್ಟ್, ಕೊಪ್ಪ | 10,000/– |
| ಇಂಡಿಯ ಕೇರ್ಸ್ ಫೌಂಡೇಶನ್ | 9,477/– |

### ಮಹನೀಯ ದಾನಿಗಳು

| | |
|---|---|
| ಶ್ರೀ ಶಂಕರ್ ಗೌಡ ಎಂ. ಪಾಟೀಲ್ | 10,000/– |
| ಶ್ರೀ ಎಚ್.ಡಿ. ವಿನಯ್ ರಾಜ್, ಚಿಕ್ಕಮಗಳೂರು | 10,000/– |
| ಶ್ರೀ ವಿ.ಗೋಪಾಲ್ ಕೃಷ್ಣಯ್ಯ ರಾವ್, ಬೆಂಗಳೂರು | 5000/– |
| ಶ್ರೀ ಉದಯಕೃಷ್ಣ ಪ್ರದಾದ್, ಕಾಸರಗೋಡು | 5000/– |
| ಶ್ರೀ ರಾಘವೇಂದ್ರ ಅಯ್ಯರ್ | 5000/– |
| ಶ್ರೀ ಗಣೇಶ್, ತೆಲಂಗಾಣ | 4882/– |
| ಮಾಸ್ಟರ್ ವಿದಿತ್ ಆತ್ರೇಯ, ಉಜಿರೆ | 4000/– |
| ಶ್ರೀ ರವೀಂದ್ರ ಮೊಗವೀರ | 2000/– |
| ಶ್ರೀ ಹರಿಕಿಶೋರ್, ಕೋಲಾರ | 2000/– |
| ಶ್ರೀ ಪ್ರಕಾಶ್ | 1111/– |
| ಶ್ರೀ ಅಂಕುಶ್, ಮೈಸೂರು | 1001/– |
| ಶ್ರೀ ಶಾಲೂ ಜೋಸೆಫ್, ಬೆಳ್ತಂಗಡಿ | 1000/– |
| ಶ್ರೀ ಶಿವಕುಮಾರ್ ಎ., ಬೆಂಗಳೂರು | 1000/– |
| ಶ್ರೀ ಗುರುರಾಜ್, ಕನ್ಯಾಡಿ | 1000/– |

### ಸೇವಾನಿಧಿ ದಾನಿಗಳು

| | |
|---|---|
| ಶ್ರೀ ಮಧ್ವಾಮೂರ್ತಿ, ಉಡುಪಿ | 5000/– |
| ಶ್ರೀ ಕೆ.ವಿನಾಯಕ ರಾವ್, ಕನ್ಯಾಡಿ | 2000/– |
| ಶ್ರೀ ಶ್ರೀಧರ್ ಕೆ.ವಿ, ಉಜಿರೆ | 1000/– |
| ಶ್ರೀ ರಾಮದಾಸ್ ಭಂಡಾರ್‌ಕರ್, ಉಜಿರೆ | 1000/– |
| ಶ್ರೀ ಸೂರ್ಯನಾರಾಯಣ ರಾವ್, ಧರ್ಮಸ್ಥಳ | 1000/– |
| ಶ್ರೀ ಗುರುರಾಜ್ ಕನ್ಯಾಡಿ | 1000/– |

## ನಮ್ಮ ತಂಡದಿಂದ ವಿನಂತಿ ಮತ್ತು ಭೇಟಿ



**ಉಜಿರೆ :** ಜುಲಾಯಿ 11 ರಂದು ಕರ್ನಾಟಕ ಬ್ಯಾಂಕಿನ ಎಂ.ಡಿ ಮತ್ತು ಸಿ.ಇ.ಒ ಆದ ಮಹಾಬಲೇಶ್ ಇವರನ್ನು ಉಜಿರೆಯ ಸಿರಿ ಸಂಸ್ಥೆಯಲ್ಲಿ ಭೇಟಿ ಮಾಡಿ ಬೆನ್ನುಹುರಿ ಅಪಘಾತ ಕ್ಕೊಳಗಾದವರ ಅವಶ್ಯಕತೆಗೆ ಅಗತ್ಯವಿರುವ ಸಾಧನಾ ಸಲಕರಣೆಯನ್ನು ದೊರಕಿಸಿಕೊಡುವಂತೆ ವಿನಂತಿಸಲಾಯಿತು. ಈ ಸಂದರ್ಭದಲ್ಲಿ ಸಿರಿ ಗ್ರಾಮೋದ್ಯೋಗ ಸಂಸ್ಥೆಯ ಕಾರ್ಯ ನಿರ್ವಹಕ ನಿರ್ದೇಶಕರಾದ ಜನಾರ್ಧನ್ ಉಪಸ್ಥಿತರಿದ್ದರು. ಸೇವಾಭಾರತಿಯ ತಂಡದಲ್ಲಿ ಕೆ.ವಿನಾಯಕ್ ರಾವ್, ಜೋಸ್ಪಿನಾ ಮತ್ತು ಮನು ಉಪಸ್ಥಿತರಿದ್ದರು.



**ಶಿರಸಿ :** ಜುಲಾಯಿ 25 ರಂದು ರೋಟರಿ ಕ್ಲಬ್ ಮಾಜಿ ಅಧ್ಯಕ್ಷರು ಮತ್ತು ಕಾರ್ಯದರ್ಶಿಯಾದ ಶ್ರೀಮತಿ ಮತ್ತು ಶ್ರೀ ಮಹೇಶ್ ಅವರನ್ನು ಕೆ.ಎಂ.ಸಿ ಆಸ್ಪತ್ರೆಯಲ್ಲಿ ಭೇಟಿ ಮಾಡಲಾಯಿತು. ಬೆನ್ನುಹುರಿ ಮುರಿತಕ್ಕೊಳಗಾದ ಶ್ರೀಮತಿ ಮಂದಿರ ಇವರು ಒತ್ತಡಗಾಯದ ಸರ್ಜರಿಗಾಗಿ ಕೆ.ಎಂ.ಸಿ ಆಸ್ಪತ್ರೆಯಲ್ಲಿ ದಾಖಲಾಗಿದ್ದರು ಗಾಯವನ್ನು ಗುಣಪಡಿಸಿ ಕೊಂಡು ಸೇವಾಧಾಮದಲ್ಲಿ ಪುನಃಶ್ಚೇತನ ಪಡೆಯಲು ಯೋಚಿಸಿರುತ್ತಾರೆ. ಸೇವಾಭಾರತಿಯ ಕಾರ್ಯ ಚಟುವಟಿಕೆ ಗಳನ್ನು ಕೇಳಿ ರೋಟರಿಯ ಮುಖಾಂತರ ಸಹಕರಿಸುವ ಭರವಸೆಯನ್ನು ನೀಡಿರುತ್ತಾರೆ.

**ನಮ್ಮ ಬೆನ್ನುಹುರಿಗೆ ಅಪಘಾತಗೊಂಡಿರುವುದೇ ಹೊರತು ಯೋಚನಾ ಸಾಮರ್ಥ್ಯಕ್ಕಲ್ಲ**

## ನಮ್ಮ ಭೇಟಿಗಳು

**ಉಡುಪಿ :** ಜುಲಾಯಿ 3 ರಂದು ಅಖಿಲಭಾರತ ಮಟ್ಟದಲ್ಲಿ ದಿವ್ಯಾಂಗರಿಗಾಗಿ ಕಾರ್ಯನಿರ್ವಹಿಸುತ್ತಿರುವ, ಸಕ್ಷಮ ಸಂಸ್ಥೆಯ ಸಂಸ್ಥಾಪನಾ ದಿನಾಚರಣೆಯು ಉಡುಪಿ ಜಿಲ್ಲೆಯ ಸಾಲುಮರ ಉಪ್ಪೂರಿನಲ್ಲಿರುವ ಸಂಸ್ಥೆಯಲ್ಲಿ ನಡೆಯಿತು. ಮುಖ್ಯ ಅಥಿತಿಯಾಗಿ ನಮ್ಮ ಸಂಸ್ಥೆಯ ಅಧ್ಯಕ್ಷರಾದ ಕೆ.ವಿನಾಯಕ ರಾವ್ ಭಾಗವಹಿಸಿದ್ದರು. ಕಮಲಾಕ್ಷ ಗುಡಿಗಾರ್ ಉಪಸ್ಥಿತರಿದ್ದರು.

**ಶಿರ್ವ :** ಜುಲಾಯಿ 3 ರಂದು ಶಿರ್ವದಲ್ಲಿರುವ ಬೆನ್ನುಹುರಿ ಟ್ಯೂಮರ್ ನಿಂದ ಬಳಲುತ್ತಿರುವ ಮಾಲಾತಿ ಜೋಯಿಷ್‌ರವರನ್ನು ಭೇಟಿ ಮಾಡಲಾಯಿತು. ಭೇಟಿಯಲ್ಲಿ ತಂಡದ ಕೆ.ವಿನಾಯಕ ರಾವ್, ರಾಯನ್ ಫೆರ್ನಾಂಡಿಸ್, ವಿಷ್ಣುಪ್ರಸಾದ್ ತೆಂಕಿಲ್ಲಾಯ, ಪ್ರಕಾಶ್, ಜೋಸ್ಫಿನಾ ಮತ್ತು ಕಮಲಾಕ್ಷ ಗುಡಿಗಾರ್ ಉಪಸ್ಥಿತರಿದ್ದರು.

## ಉತ್ತರ ಕನ್ನಡ ಜಿಲ್ಲೆಯ ಕುಮಟಾ ಭೇಟಿ







**ಕುಮಟಾ :** 13–7–2022 ರಂದು ಉತ್ತರ ಕನ್ನಡ ಜಿಲ್ಲೆಯಲ್ಲಿ ನಮ್ಮ ಸೇವೆಯನ್ನು ವಿಸ್ತರಿಸುವ ಸಲುವಾಗಿ ಕುಮಟಾಕ್ಕೆ ಭೇಟಿ ನೀಡಲಾಯಿತು. ಕುಮಟಾದ ವೈದ್ಯರಾದ ಡಾ॥ ಗಣೇಶ್, ಸೇವಾಭಾರತಿ ಕಾರವಾರ ಇದರ ಪ್ರಮುಖರಾದ ಮೋಹನ್ ಗುಣಗಾ, ಎಂ.ಆರ್.ಡಬ್ಲ್ಯೂ ಆದ ಶುಭಾ ಭಟ್, ನೋಡಲ್ ಸೂಪರ್‌ವೈಸರ್ ಉಷಾ, ಕೆನರಾ ಎಕ್ಸಲೆನ್ಸ್ ಪಿ.ಯು ಕಾಲೇಜಿನ ಪ್ರಮುಖರನ್ನು, ವಿಶ್ವ ಹಿಂದೂಪರಿಷತ್‌ನ ಮಹೇಶ್‌ರನ್ನು ಭೇಟಿಮಾಡಿ ಮುಂದಿನ ದಿನಗಳಲ್ಲಿ ಸಂಸ್ಥೆಯೊಂದಿಗೆ ಕೈ ಜೋಡಿಸುವಂತೆ ಕೇಳಿಕೊಳ್ಳಲಾಯಿತು. ಅಲ್ಲದೆ ಕುಮಟಾದ ಸೇವಾಭಾರತಿಯ ಚಟುವಟಿಕೆಗಳಿಗೆ ತಂಡವನ್ನು ರಚಿಸಲಾಯಿತು.

## ಸೇವಾಭಾರತಿಯ ಸಂಸ್ಥಾಪಕರಾದ ಕೆ.ವಿನಾಯಕ್ ರಾವ್ ಅವರ ಹುಟ್ಟುಹಬ್ಬ ಆಚರಣೆ



**ಕೊಕ್ಕಡ :** ನಮ್ಮ ಸಂಸ್ಥೆಯ ಅಧ್ಯಕ್ಷರು, ಸೇವಾಧಾಮದ ಸಂಸ್ಥಾಪಕರಾದ ಕೆ.ವಿನಾಯಕ ರಾವ್ ಅವರು 29–07–2022 ರಂದು ಸೇವಾಧಾಮದಲ್ಲಿ ತಮ್ಮ ಹುಟ್ಟುಹಬ್ಬವನ್ನು ಇಬ್ಬರು ಬೆನ್ನುಹುರಿ ಅಪಘಾತಕ್ಕೊಳಗಾದವರಿಗೆ ಗಾಲಿಕುರ್ಚಿಯನ್ನು ನೀಡಿ, ದಿವ್ಯಾಂಗರಿಗೆ ಧನ ಸಹಾಯ ನೀಡಿ, ಸಸಿ ನೆಡುವ ಮೂಲಕ ತಮ್ಮ ಹುಟ್ಟುಹಬ್ಬವನ್ನು ಆಚರಿಸಿದರು.

ಸೌತಡ್ಕ ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ ನ ಅಧ್ಯಕ್ಷರಾದ ಕೃಷ್ಣ ಭಟ್, ಸೇವಾಭಾರತಿಯ ಕಾರ್ಯದರ್ಶಿಯಾದ ಸ್ವರ್ಣಗೌರಿ, ಟ್ರಸ್ಟಿ ಬಾಲಕೃಷ್ಣ , ಮಂಜುಳಾ ವಿ. ಪ್ರಸಾದ್ ಉಪಸ್ಥಿತರಿದ್ದು, ಶುಭ ಹಾರೈಸಿದರು. ಸಂಸ್ಥೆಯ ಸಿಬ್ಬಂದಿಗಳು, ಸ್ವಯಂ ಸೇವಕರು ಮತ್ತು ಸಲಹಾ ಮಂಡಳಿ ವಿಷ್ಣುಪ್ರಸಾದ್, ಮಂಜುಳಾ ವಿ.ಪ್ರಸಾದ್ ಉಪಸ್ಥಿತಿಯಲ್ಲಿದ್ದರು.

## 60ನೇ ವಾರ್ಷಿಕೋತ್ಸವ



**ಕೊಕ್ಕಡ :** ಜುಲಾಯಿ 3 ರಂದು ಶ್ರೀಮತಿ ಮತ್ತು ಶ್ರೀ ಗೋಪಾಲ ಆಚಾರಿಯವರ 60ನೇ ವಿವಾಹ ವಾರ್ಷಿಕೋತ್ಸವದ ಪ್ರಯುಕ್ತ ಸೇವಾಧಾಮದ 10 ನೋಂದಾಯಿತ ಫಲಾನುಭವಿಗಳಿಗೆ ಗಾಲಿಕುರ್ಚಿಗಳನ್ನು ಉಚಿತವಾಗಿ ವಿತರಿಸಲಾಯಿತು. ಈ ಸಂದರ್ಭದಲ್ಲಿ ಸೌತಡ್ಕ ಶ್ರೀಮಹಾಗಣಪತಿ ಸೇವಾ ಸಮಿತಿಯ ಅಧ್ಯಕ್ಷರಾದ ಕೆ.ಕೃಷ್ಣ ಭಟ್ ಫಲಾನುಭವಿಗಳಿಗೆ ಗಾಲಿಕುರ್ಚಿಗಳನ್ನು ಹಸ್ತಾಂತರಿಸಿದರು. ಅಧ್ಯಕ್ಷರಾದ ಕೆ.ವಿನಾಯಕ್ ರಾವ್ ಪ್ರಾಸ್ತಾವಿಕ ನುಡಿಯ ನ್ನಾಡಿದರು. ಕಾರ್ಯಕ್ರಮಕ್ಕೆ ಸಿಬ್ಬಂದಿಯಾದ ಜೋಸ್ಫಿನಾ ಧನ್ಯವಾದವಿತ್ತರು.

## – ಬೆಂಗಳೂರು ಭೇಟಿ –



**ಬೆಂಗಳೂರು :** ಜುಲಾಯಿ 18 ರಂದು ಬೆಂಗಳೂರಿನ ಉತ್ತರಹಳ್ಳಿಯಲ್ಲಿ ವಾಸವಾಗಿರುವ ಬೆನ್ನುಹುರಿ ಅಪಘಾತಕ್ಕೊಳಗಾದ ಪದ್ಮಾಕರ್ ಅವರನ್ನು ನಮ್ಮ ತಂಡದಿಂದ ಭೇಟಿ ಮಾಡಲಾಯಿತು.



**ಬೆಂಗಳೂರು :** 19–07–2022 ಕಿರ್ಲೋಸ್ಕರ ಟೊಯೊಟಾ ಟೆಕ್ಸ್‌ಟೈಲ್ ಮಷೀನರಿ ಪ್ರೈವೇಟ್ ಲಿಮಿಟೆಡ್‌ನ ಮೆನೇಜರ್ ಆದ ಶ್ರೀ ಪ್ರವೀಣ್ ಮತ್ತು ವೈದ್ಯಕೀಯ ಅಧಿಕಾರಿಯಾದ ಡಾ॥ ಮಧುಸೂಧನ್ ಅವರನ್ನು ಭೇಟಿಮಾಡಿ ಸಂಸ್ಥೆಗೆ ಸಹಕರಿಸುವಂತೆ ಕೇಳಿಕೊಳ್ಳಲಾಯಿತು.



**ಬೆಂಗಳೂರು :** ದಿನಾಂಕ 20–07–2022 ರಂದು ಬೆಂಗಳೂರು ಯೂತ್ ಪರ್ ಸೇವಾ ಸಂಸ್ಥೆಯ ಮುಖ್ಯಸ್ಥರಾದ ವೆಂಶಟೇಶ್‌ಮೂರ್ತಿಯವರನ್ನು ಭೇಟಿಮಾಡಿ ಸೇವಾ ಭಾರತಿಯ ಬಗ್ಗೆ ತಿಳಿಸಿ ಸಂಸ್ಥೆಗೆ ಸಹಕರಿಸುವಂತೆ ಮನವಿ ಮಾಡಲಾಯಿತು.



**ಬೆಂಗಳೂರು :** ಜುಲಾಯಿ 20 ರಂದು ಬೆಂಗಳೂರಿನ ಬಿ.ಎಂ.ಎಸ್ ಕಾಲೇಜ್ ಸಿ.ಟಿ.ಪುಟ್ಟಸ್ವಾಮಿ ಕೆಮಿಕಲ್ ಇಂಜಿನಿಯರಿಂಗ್ ಕಾಲೇಜ್‌ನ ಪ್ರೊಫೆಸರ್‌ರನ್ನು ಭೇಟಿಮಾಡಿ, ಸೇವಾಭಾರತಿಯಲ್ಲಿ ನಡೆಯುವ ಕಾರ್ಯಕ್ರಮಗಳ ಬಗ್ಗೆ ತಿಳಿಸಿ, ಮುಂದೆ ನಡೆಯುವ ಕಾರ್ಯಕ್ರಮಕ್ಕೆ ಸಹಕರಿಸವಂತೆ ಕೇಳಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಕೆ.ವಿನಾಯಕ್ ರಾವ್, ರೂಪಾಲಕ್ಷ್ಮಿ, ಆಶ್ರಿತ್ ಉಪಸ್ಥಿತರಿದ್ದರು.




**ಬೆಂಗಳೂರು:** ಜುಲಾಯಿ 22 ರಂದು ಬೆಂಗಳೂರಿನ ಧ್ವನಿ ಪೌಂಡೇಷನ್‌ನ ಮೂಲಕ ನಿರಂತರ ಯೋಜನೆಯಡಿ ಸಂಸ್ಥೆಗಳ ಸಾಮರ್ಥ್ಯಅಭಿವೃದ್ಧಿಗಾಗಿ 2 ವರ್ಷಗಳಿಂದ ನಡೆಯುವ ತರಭೇತಿಯ ಸಮಾರೋಪ ಸಮಾರಂಭವು ಬೆಂಗಳೂರಿನ ವೈ.ಎಮ್.ಸಿ.ಎ. ಸಭಾಭವನದಲ್ಲಿ ನಡೆಯಿತು.

ಸುಮಾರು 26 ಸಂಸ್ಥೆಗಳ ಪ್ರಮುಖರು ಭಾವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಇನ್‌ಫೋಸಿಸ್‌ನ ಸಿ.ಎ.ಓ ಆದ ಮತ್ತು ಎಂ.ಡಿ. ಆಗಿರುವ ಶೇಬುಲಾಲ್ ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ನಮ್ಮ ಸಂಸ್ಥೆಯ ಅಧ್ಯಕ್ಷರು ಕೆ.ವಿನಾಯಕ್ ರಾವ್, ಗಿರೀಶ್ ರಾವ್ ಉಪಾಧ್ಯಕ್ಷರು, ಸಲಹಾಮಂಡಳಿಯ ಸದಸ್ಯರಾದ ಹರೀಶ್ ಟಿ.ಪಿ ಭಾಗವಹಿಸಿ ಪ್ರಮಾಣ ಪತ್ರ ಸ್ವೀಕರಿಸಿದರು. ಕರ್ನಾಟಕದ 26 ಸಂಸ್ಥೆಯ ಪ್ರಮುಖರು ಭಾಗವಹಿಸಿದ್ದರು.

## ಸೇವಾಧಾಮಕ್ಕೆ ಭೇಟಿ




**ಕೊಕ್ಕಡ :** ಜುಲಾಯಿ 11 ರಂದು ಮಂಗಳೂರಿನ ಎಚ್.ಪಿ.ಸಿ.ಎಲ್.ನ ಹಿರಿಯ ಪ್ರಬಂಧಕರಾದ ಗೋವಿಂದ ಗೋಪಿನಾಥನ್ ಮತ್ತು ಪ್ರಬಂಧಕರಾದ ಉದಯ್ ಶೆಟ್ಟಿ ಸೇವಾಧಾಮಕ್ಕೆ ಭೇಟಿ ಮಾಡಿ ಮಾಹಿತಿ ಪಡೆದುಕೊಂಡರು. ಸೇವಾಭಾರತಿಯ ಸೇವಾ ಕಾರ್ಯಗಳಿಗೆ ಎಚ್.ಎಫ್.ಸಿ.ಎಲ್.ನ ಸಿ.ಎಸ್.ಆರ್.ನ ಮುಖಾಂತರ ಸಹಕರಿಸುವಂತೆ ಮನವಿ ಮಾಡಲಾಯಿತು. ನಮ್ಮ ಹಿತೈಷಿಯಾದ ಕವಿತಾ ಎಂ.ಪಿ. ಇವರ ಪ್ರಯತ್ನದಲ್ಲಿ ಈ ಭೇಟಿಯನ್ನು ನಿಗಧಿಪಡಿಸಲಾಗಿತ್ತು.



**ಕೊಕ್ಕಡ :** ಜುಲಾಯಿ 11 ರಂದು **"ಸೇವಾ–ಸಂಗಮ"**ಎಂಬ ಶೀರ್ಷಿಕೆಯಡಿ ಬೆನ್ನುಹುರಿಯ ರಚನೆ ಮತ್ತು ಕಾರ್ಯವೈಖರಿಯ ಬಗ್ಗೆ ಮಾಹಿತಿ ಕಾರ್ಯಗಾರ ನಡೆಯಿತು. ಮಣಿಪಾಲ ಕೆ.ಎಂ.ಸಿ ಆಸ್ಪತ್ರೆಯ ಪಿ.ಎಂ.ಆರ್. ವಿಭಾಗದ ಅಸಿಸ್ಟೆಂಟ್ ಪ್ರೊಫೆಸರ್ ಆದ ಡಾ॥ ಮೈತ್ರೇಯಿ ಸಿ. ಪಾಟೀಲ್ ಅವರು ಸಂಪನ್ಮೂಲ ವ್ಯಕ್ತಿಯಾಗಿ ಆನ್ ಲೈನ್ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸಹಕರಿಸಿದರು. ಇಲ್ಲಿಯ 91 ಜನ ಕಾರ್ಯಕ್ರಮದ ಪ್ರಯೋಜನಾ ಪಡೆದುಕೊಂಡರು.

### ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

| | |
|---|---|
| ರೂ. 2000/– | ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್‌ಗಳಿಗಾಗಿ ಸಹಕಾರ. |
| ರೂ. 6000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ |
| ರೂ. 4500/– | ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ |
| ರೂ. 3000/– | ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ದಿನದ ಊಟೋಪಚಾರಕ್ಕೆ ಸಹಕಾರ |
| ರೂ. 10000/– | ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ |
| ರೂ. 15000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ |
| ರೂ. 10000/– | ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು |

### Account Details

| | |
|---|---|
| A/c Holder | - M/s. Sevabharathi(R) |
| A/c No | - 120000400920 |
| IFS Code | - CNRB0010246 |
| Bank | - Canara Bank, Dharmasthala Branch |
| A/c Type | - Current Account |

| | |
|---|---|
| A/c Holder | - M/s. Sevabharathi(R) |
| A/c No | - 01682200072637 |
| IFS Code | - CNRB0010168 |
| Bank | - Canara Bank, Kokkada Branch |

**DONATE & JOIN US IN OUR MISSION**

# ಆಯ ತಪ್ಪಿದರೂ ಬದುಕಿನ ಏಣಿ ಏರಿದ ಛಲಗಾರ

## ಬಾಯಾರಿದ ಜೀವನಕ್ಕೆ ದಾರಿ ತೋರಿದ ಎಳನೀರು

**ಬೆಳ್ತಂಗಡಿ – ಆ.29: ಶಿಕ್ಷಣವು ವ್ಯಕ್ತಿಯ ಜ್ಞಾನ ಕೌಶಲ್ಯವನ್ನು ವೃದ್ಧಿಸಿದರೆ, ಅನುಭವ ಶಿಕ್ಷಣದಾಚೆಗಿನ ಬದುಕಿನ ಪಾಠವನ್ನು ಕಲಿಸುತ್ತದೆ. ವೃತ್ತಿ ಯಾವುದೇ ಇರಲಿ ಬದುಕಿನ ತೇರು ಎಳೆಯಲು ಬೇಕಾಗುವುದು ಪದವಿಯಲ್ಲ, ತಾನು ಅರಸಿದ ಕರ್ತವ್ಯದ ಚಾಣಾಕ್ಷತನ. ತಾನಾಯಿತು ತನ್ನ ವೃತ್ತಿಯಾಯಿತು ಅಂದುಕೊಂಡಿದ್ದ ಸ್ನೇಹ ಜೀವಿಯೋರ್ವರಿಗೆ ಅದೇ ವೃತ್ತಿ ಆಯ ತಪ್ಪಿದಾಗ ಒಂದೊಮ್ಮ ಬದುಕಿನ ಹಳಿಯಿಂದ ಹೊರ ನಡೆದರೂ ತನ್ನೊಳಗಿದ್ದ ಆತ್ಮವಿಶ್ವಾಸ ಪುಟಿದೆದ್ದು ಬದುಕು ಕಟ್ಟಿಕೊಂಡ ಸಾಹಸಿಯೋರ್ವರ ಯಶೋಗಾಥೆ ನಿಮ್ಮ ಮುಂದಿಡುತ್ತಿದ್ದೇವೆ.**

ಉಡುಪಿ ಜಿಲ್ಲೆ ಮಲ್ಪೆಯ ಜಯ ಪೂಜಾರಿ ಕಲ್ಮಾಡಿ ಎಂಬುವವರು ತಮ್ಮ ಸುಂದರ ಕುಟುಂಬದಲ್ಲಿ ಒಟ್ಟು ಎಂಟು ಮಂದಿ ಸದಸ್ಯರೊಡಗೂಡಿ ಜನಿಸಿದವರು. ವಿದ್ಯಾಭ್ಯಾಸ ಮೊಟಕುಗೊಳಿಸಿ ಜೀವನ ವೃತ್ತಿಯೆಂದು ತೆಂಗಿನಕಾಯಿ ಕೀಳಲು ಆರಂಭಿಸಿದರು. ಜೀವನ ಮುನ್ನಡೆಯುತ್ತಾ ಸಾಗುವ ಸಂದರ್ಭದಲ್ಲಿ ವಿಧಿಯಾಟ ಬೇರೆಯೇ ಆಯ್ಕೆ ಮಾಡಿತ್ತು. 2019 ಡಿಸೆಂಬರ್ 19 ರಂದು ಇವರು ತೆಂಗಿನಕಾಯಿ ಕೀಳಲು ಮರ ಹತ್ತಿದ ಸಂದರ್ಭದಲ್ಲಿ ಆಯ ತಪ್ಪಿ ಕೆಳಕ್ಕೆ ಬಿದ್ದುಬಿಟ್ಟರು.

ಬಿದ್ದ ರಭಸಕ್ಕೆ ಏನು ಆಗಬಾರದಿತ್ತೋ ವಿಧಿ ಅದೇ ಬರೆದಿತ್ತು. ಜೀವಕ್ಕೆ ಆಧಾರವಾದ ಬೆನ್ನುಹುರಿಯನ್ನೇ ಕಳಚಿಬಿಟ್ಟಿತ್ತು. ಅಪಘಾತ ತೀವ್ರತೆಯಿಂದ ಮಣಿಪಾಲದ ಕೆ.ಎಂ.ಸಿ. ಆಸ್ಪತ್ರೆಗೆ ದಾಖಲಾದರು. ಚಿಕಿತ್ಸೆಯೇನೋ ಪಡೆದರು, ಆದರೇನು ಫಲ ಬರೋಬ್ಬರಿ 7 ವರ್ಷಗಳ ಕಾಲ ಹಾಸಿಗೆಯಿಂದ ಮೇಲಕ್ಕೇಳಲಾಗದೆ ಕ್ಲಿಷ್ಟಕರವಾದ ಪರಿಸ್ಥಿತಿ ಎದುರಿಸಿಬಿಟ್ಟರು. ತಮ್ಮ ದಿನನಿತ್ಯದ ಚಟುವಟಿಕೆಗಳಿಗೆ ಬೇರೆಯವರನ್ನು ಅವಲಂಬಿಸುವ ಪರಿಸ್ಥಿತಿ. ಜೀವನವೇ ಸಾಕು ಅನ್ನುವಷ್ಟರ ಮಟ್ಟಿಗೆ ಅವರನ್ನು ಕರೆದೊಯ್ಯಿತು.

ಹೀಗಿರುವಾಗ ಬದುಕನ್ನು ಮರು ಹಳಿಗೆ ತರಬೇಕು ಎಂಬ ಚಿಂತೆಯಿತ್ತು. ಆದರೆ ಹೇಗೆ ಎಂಬುದು ಅಗೋಚರವಾಗಿತ್ತು. ಹೀಗಿರುವಾಗ ಅದೊಮ್ಮೆ ಕನ್ಯಾಡಿ ಸೇವಾಭಾರತಿ ಮುಖಾಂತರ ಸೇವಾಧಾಮ ಆಯೋಜಿಸಿದ ಎರಡು ದಿನಗಳ ಬೆನ್ನುಹುರಿ ಅಪಘಾತಕ್ಕೊಳಗಾದವರಿಗೆ ಆರೋಗ್ಯ ತಪಾಸಣೆ ಶಿಬಿರದಲ್ಲಿ ಪಾಲ್ಗೊಳ್ಳುವಂತೆ ಮತ್ತೆ ವಿಧಿ ಅವರನ್ನ ಕೈಹಿಡಿಯಲು ಮುಂದಾಗಿತ್ತೋ ಏನೋ... ಇಲ್ಲಿ ಇವರಿಗೆ ಪುನಃಶ್ಚೇತನ ಮತ್ತು ಪುನಃಶ್ಚೇತನದ ನಂತರದ ಜೀವನದ ಬಗ್ಗೆ ಮಾಹಿತಿ ನೀಡಲಾಯಿತು.

ಬೆಂಗಳೂರು ಎ.ಪಿ.ಡಿ. ಸಂಸ್ಥೆಗೆ ಪುನಃಶ್ಚೇತನಕ್ಕಾಗಿ ಇವರನ್ನು ಸೇವಾಭಾರತಿಯೂ ಕಳುಹಿಸಿತು. ಅಲ್ಲಿ 4 ತಿಂಗಳ ಕಾಲ ಪುನಃಶ್ಚೇತನ ಪಡೆದರು. ಪುನಃಶ್ಚೇತನ ಪ್ರಾರಂಭದಲ್ಲಿ ಸ್ವ ಉದ್ಯೋಗ ಮಾಹಿತಿಯನ್ನು ಪಡೆದುಕೊಂಡ ಇವರು ನಾನೂ ಕೂಡಾ ಪುನಃಶ್ಚೇತನದ ನಂತರ ಸ್ವ ಉದ್ಯೋಗವನ್ನರಸಿ ಜೀವನ ನಡೆಸಬೇಕೆನ್ನುವ ಆಶಯ ಇವರಲ್ಲಿ ಚಿಗುರೊಡೆಯಿತು. ಹಾಸಿಗೆಯಿಂದ ನಿಧಾನವಾಗಿ ವ್ಹೀಲ್ ಚೇರ್ ಆಶ್ರಯಿಸಿದರು. ಹಾಸಿಗೆ ಹಿಡಿದಿದ್ದ ಇವರು ಮೇಲಕ್ಕೆದ್ದು ಕುಳಿತುಕೊಳ್ಳುವ ಅವಕಾಶ ಇವರಿಗೆ ಸಿಕ್ಕಿತು. ಇದರಿಂದಾಗಿ ತಾನೂ ಉದ್ಯೋಗವನ್ನು ಮಾಡಬಲ್ಲೆ ಎಂಬ ನಂಬಿಕೆ ಇವರ ಮನಸ್ಸಿನಲ್ಲಿ ಮೊಳಕೆಯೊಡೆಯಿತು.




ಪುನಃಶ್ಚೇತನ ಪಡೆದ ನಂತರ ಎ.ಪಿ.ಡಿ. ಮತ್ತು ಸೆಲ್ಕೋ ಪ್ರೈವೇಟ್ ಲಿಮಿಟೆಡ್‌ನ ವತಿಯಿಂದ ಸೋಲಾರ್ ಚಾಲಿತದ ವಾಹನವನ್ನು ನೀಡಿ ಎಳನೀರು ವ್ಯಾಪಾರದ ವ್ಯವಸ್ಥೆಯನ್ನು ಕಲ್ಪಿಸಲಾಯಿತು. ಅಲ್ಲಿಂದ ಆರಂಭವಾದ ಜೀವನದ ಮರು ಬಂಡಿ ಪ್ರಸಕ್ತ ನಾಲ್ಕು ವರ್ಷಗಳಿಂದ ಎಳನೀರಿನಿಂದ ಬಂದ ಆದಾಯ ಜೀವನದಲ್ಲಿ ಬದುಕಬೇಕೆಂಬ ದಾಹವನ್ನು ನೀಗಿಸುತ್ತಿದೆ. ಜತೆ ಜತೆಗೆ ಸೇವಾಭಾರತಿ ಮತ್ತು ಎ.ಪಿ.ಡಿ. ಇವರ ಜೀವನ ಸುಧಾರಣೆಗೆ ಬೇಕಾದ ಹಾದಿಯನ್ನು ದಯಪಾಲಿಸಿದೆ. ಹುಟ್ಟಿಸಿದ ದೇವರು ಹುಲ್ಲು ಮೇಯಿಸುತ್ತಾನೆಯೇ..

**ಛಲವೆಂಬ ಆಶಯ ವಿದ್ದಾಗ ಅವಕಾಶ ಎಂಬ ಆಶ್ರಯ ಭಗವಂತ ಸೃಷ್ಟಿಸುತ್ತಾನೆ. ಎಲ್ಲವೂ ಸದಾಚಾರ ಸತ್ ಚಿಂತನೆಗಳಿಂದ ಕೂಡಿದ್ದಲ್ಲಿ ಜಯ ನಮ್ಮದೆ** ಎಂಬ ಯಶೋಗಾಥೆ ಸರಣಿಯೊಂದಿಗೆ ಲೇಖನಿ ವಿರಾಮ.

*The only disability in life is bad attitude*